# ಶುದ್ಧ ಹುಚ್ಚು



ನನ್ನ ಮಲಗುವ ಒಂದೇ ಕೋಣೆಗೆ
ಮೂರು ದೊಡ್ಡ ದೊಡ್ಡ ಕಿಟಕಿಗಳು
ಪರದೆಯಿಲ್ಲ.

ಪ್ರತಿ ತಿಂಗಳು ಹುಣ್ಣಿಮೆಗೆ ಮೂರು ದಿನ
ಮೊದಲು ಮತ್ತು ನಂತರ ನನಗೆ
ನಿದ್ದೆಯಿಲ್ಲ.

ಇನ್ನು ಆ ದಿನದ ಬಗೆ ಹೇಳಬಾರದು
ನನಗೆ ತಿಂಗಳಿನ ಶುದ್ಧ ಹುಚ್ಚು!

ಏನು ಮಾಡಲಿ ನಾನು?
ಎಂದು ಕೇಳಿದರೆ ಅವನು ಹೇಳುತ್ತಾನೆ

ವಿದ್ಯಾ ಪತಿ:
'ಬೆಳದಿಂಗಳಿನಲ್ಲಿ ತುಂಬ ಬೆಳಕಿರುತ್ತದೆ
ಎಷ್ಟೆಂದರೆ ಪುಸ್ತಕ ಓದಬಹುದು
ಆದರೆ ಪುಸ್ತಕ ಓದಬಾರದು!

ಗೆಳತೀ, ನಾನೇನು ಮಾಡುತ್ತೇನೆ ಗೊತ್ತೇ...
ಆಕಾಶದಲ್ಲಿ ತೇಲುವ ಒಂದು ಚಂದ್ರನನ್ನು ನೋಡುತ್ತೇನೆ
ಮತ್ತೆ ನಿನ್ನ ಬಳಿಯಿರುವ ಮೂವರು ಚಂದ್ರನನ್ನು
ನೆನೆಯುತ್ತೇನೆ... ನೆನೆ... ನೆನೆದು!...'